# ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ

ಸಿ.ಸಿ ನಂಃ 138/2024

ಸಿಡಬ್ಲ್ಯೂಃ 1

ಹೆಸರುಃ ಪೂಜಾ ಕಿರಣ್ ಕುಮಾರ

ಗಂಡನ ಹೆಸರುಃ ಕಿರಣ್ ಕುಮಾರ

ವಯಸ್ಸುಃ 33 ವರ್ಷ

ಉದ್ಯೋಗಃ ಗೃಹಿಣಿ

ವಾಸಃ ಶಿವಮೊಗ್ಗ ಜಿಲ್ಲೆ , ಸೊರಬ ತಾಲ್ಲೂಕು , ಶಿಂದ್ಲಿ ನಿವಾಸಿ , ಹಾಲಿ ಹೊಸೂರು , ಸಿದ್ದಾಪುರ .

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 13-10-2025 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

1 ನೇ ಆರೋಪಿ ಕಿರಣ್ ಕುಮಾರ್ .ಎನ್ .ಬಿ ನನ್ನ ಗಂಡ. . 2 ನೇ ಆರೋಪಿ ನನ್ನ ಮಾವ. 3 ನೇ ಆರೊಪಿ ನನ್ನ ಮೈದುನ. 4 ನೇ ಆರೊಪಿ ನನ್ನ ಅತ್ತೆ. ನನ್ನ ತಂದೆಯ ಹೆಸರು ಲಕ್ಷ್ಮಣ್ ಬಿ ನಾಯ್ಕ ಅವರು ಮಾಜಿ ಸೈನಿಕರಾಗಿದ್ದರು . ನನ್ನ ತಾಯಿಯ ಹೆಸರು ಜಯಲಕ್ಷ್ಮೀ .

ನನ್ನ ಮದುವೆಯು 1 ನೇ ಆರೋಪಿತನ ನಡುವೆ ದಿಃ 01-05-2015 ರಂದು ಗುರುಹಿರಿಯರು ನೋಡಿ ಮಾಡಿದ ಮದುವೆ ಆಗಿರುತ್ತದೆ. ನಮ್ಮ ಮದುವೆಯ ಹೊಸೂರು ಬಂಕೇಶ್ವರ ದೇವಸ್ಥಾನದಲ್ಲಿ ಆಗಿರುತ್ತದೆ. ಮದುವೆಯ ಮಾತುಕತೆಯ ಸಮಯದಲ್ಲಿ 1 ರಿಂದ 3 ನೇ ಆರೋಪಿತರು ವರದಕ್ಷಿಣೆಯನ್ನು ಕೇಳಿರುತ್ತಾರೆ. ಅದರಂತೆ ನನ್ನ ತಂದೆಯವರು ನಾಲ್ಕೂವರೆ ಲಕ್ಷ ರೂ ವರದಕ್ಷಿಣೆ ಹಾಗೂ 11 ತೊಲೆ ಬಂಗಾರವನ್ನು, 1 ಕೆ.ಜಿ ಬೆಳ್ಳಿಯನ್ನು ಆರೋಪಿತರಿಗೆ ಕೊಟ್ಟಿರುತ್ತಾರೆ .

ಮದುವೆಯಾದ ನಂತರ ನಾನು 3- 4 ತಿಂಗಳುವರೆಗೆ ಆರೋಪಿತನೊಂದಿಗೆ ಚೆನ್ನಾಗಿ ಬಾಳ್ವೆ ಮಾಡಿರುತ್ತೇನೆ. ನಂತರ ಆರೋಪಿತರು ನನಗೆ ಕೊಂಕು ಮಾತನಾಡಲು ಪ್ರಾರಂಬಿಸಿರುತ್ತಾರೆ ನಾನು ಯಾವುದೇ ಕೆಲಸವನ್ನು ಮಾಡಿದರು, ಯಾವುದೇ ಅಡಿಗೆಯನ್ನು ಮಾಡಿದರೂ ಅದನ್ನು ಸರಿಯಾಗಿ ಮಾಡಿಲ್ಲ ಸೂಳೆ , ರಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದರು. ನಂತರ ಆರೋಪಿತರು ಇನ್ನು ಹೆಚ್ಚಿನ ವರದಕ್ಷಿಣೆಯನ್ನು ತೆಗೆದುಕೊಂಡು ಬಾ ಎಂದು ನನಗೆ ಕಿರುಕುಳ ಕೊಡಲು ಪ್ರಾರಂಭಸಿರುತ್ತಾರೆ . ನಾನು ಅವರ ಬೇಡಿಕೆಗೆ ಒಪ್ಪದಿದ್ದ ಕಾರಣ ಅವರು ನನಗೆ ಬಹಳಷ್ಟು

ಕಿರುಕುಳ ನೀಡಲು ಪ್ರಾರಂಬಿಸಿರುತ್ತಾರೆ . ಸದ್ರಿ ವಿಷಯದ ಬಗ್ಗೆ ನಾನು ನನ್ನ ತಂದೆ ತಾಯಿಗೆ ತಿಳಿಸಿರುತ್ತೇನೆ . ಅದಕ್ಕೆ ಅವರು ಸ್ವಲ್ಪ ದಿನ ಹೊಂದಾಣಿಕೆ ಮಾಡಿಕೊಂಡು ಹೋಗು ಎಂದು ನನಗೆ ತಿಳಿಸಿರುತ್ತಾರೆ . ಅದೇ ರೀತಿ ಕಿರುಕುಳ ಕೊಡುತ್ತಿದ್ದರು ನಂತರ 1 ನೇ ಆರೋಪಿತನು ಒಂದು ಕಾರನ್ನು ಕೊಡಿಸುವ ಬೇಡಿಕೆಯನ್ನು ಇಟ್ಟನು . ಅದರಂತೆ ನನ್ನ ತಂದೆಯವರು ದಿಃ 16-06-2016 ರಂದು ಮಾರುತಿ ಸುಜುಕಿ ಎ ಸ್ಟಾರ್ ಕಾರ್ ಸಂಖ್ಯೆ KA-04/MH 8303 ಅನ್ನು ಕೊಡಿಸಿರುತ್ತಾರೆ . ಸದ್ರಿ ಕಾರನ್ನು ನನ್ನ ತಂದೆಯವರು ಆರ್.ಎನ್.ಶೆಟ್ಟಿ ಕಾರ್ ಶೋ ರೂಂ ನಿಂದ ಅವರ SBI ನಲ್ಲಿದ್ದ ಖಾತೆಯಲ್ಲಿನ 2,35,000/- ರೂಗಳನ್ನು ಪಡೆದು ಕಾರನ್ನು ಕೊಡಿಸಿರುತ್ತಾರೆ .

ಕೆಲವು ದಿನಗಳ ನಂತರ ದಿಃ 24-06-2017 ರಂದು 18,500/- ರೂಗಳ ಒಂದು Micromax TV ಯನ್ನು ಆರೋಪಿತರಿಗೆ ನನ್ನ ತಂದೆಯವರು ರಾಜಶ್ರೀ ಶೋರೂಂ , ಸಾಗರದಿಂದ ಕೊಡಿಸಿರುತ್ತಾರೆ . ನಂತರ ಆರೋಪಿತರು ಇನ್ನಷ್ಟು ಬೇಡಿಕೆಯನ್ನು ಇಟ್ಟು ನನಗೆ ಕಿರುಕುಳ ಕೊಡುತ್ತಿದ್ದರು . ಅದಕ್ಕೆ ನನ್ನ ತಂದೆಯವರು ನನ್ನ ಬಳಿ ಈಗ ಹಣ ಇಲ್ಲ ಎಂದು ಹೇಳಿರುತ್ತಾರೆ . ನಂತರ ಆರೋಪಿತರು ನನ್ನ ತಂದೆಯವರಿಂದ ಅವರ SBI ಬ್ಯಾಂಕ್ ಖಾತೆಯ ಡೆಬಿಟ್ ಕಾರ್ಡ್ ಅನ್ನು ಕಿತ್ತುಕೊಂಡಿರುತ್ತಾರೆ . ನಂತರ ನನ್ನ ತಂದೆಯವರಿಗೆ ಕಿರುಕುಳ ಕೊಟ್ಟು ಅದರ ಪಿನ್ ಅನ್ನು ಪಡೆದು ಬಹಳಷ್ಟು ಕಡೆ ಬಳಕೆ ಮಾಡಿ ಹಣವನ್ನು ಪಡೆದಿರುತ್ತಾರೆ .

ಮೇ 2020 ರಂದು ಸದ್ರಿ ಡೆಬಿಟ್ ಕಾರ್ಡ್ ಅನ್ನು ಬಳಕೆ ಮಾಡಿ ಶಿರಸಿಯ ಬಂಗಾರದ ಅಂಗಡಿಯಲ್ಲಿ ಬಂಗಾರವನ್ನು ಖರೀದಿ ಮಾಡಿರುತ್ತಾರೆ . ನಾವು ಸದ್ರಿ ಡೆಬಿಟ್ ಕಾರ್ಡ್ ಅನ್ನು ಆರೋಪಿತರಿಗೆ ಹಿಂದಿರುಗಿಸಲು ಕೇಳಿದಾಗ ಆರೋಪಿತರು ನೀವು ಸಾಕಷ್ಟು ವರದಕ್ಷಿಣೆಯನ್ನು ನೀಡದೇ ಇದ್ದ ಕಾರಣ ನಾವು ಇದನ್ನು ಬಳಕೆ ಮಾಡುತ್ತಿರುತ್ತೇವೆ ಎಂದು ಹೇಳಿದ್ದರು .

ನಂತರ ದಿಃ 15-08-2016 ರಂದು ನಾವು ಸಾಗರದಿಂದ ಶಿಂಡ್ಲಿಗೆ ಆರೋಪಿತರ ಮನೆಗೆ ಹೋದಾಗ ಆರೋಪಿತರು ಅವರು ಸೊಸೈಟಿ ಮತ್ತು ಬ್ಯಾಂಕ್ ನಿಂದ ಮಾಡಿದ ಮನೆಯ ಸಾಲದ ಕಂತನ್ನು ಕಟ್ಟುವ ಸಲುವಾಗಿ ನನಗೆ ನನ್ನ ತಂದೆಯ ಮನೆಯಿಂದ ಹಣ ತೆಗೆದುಕೊಂಡು ಬಾ ಎಂದು ಹೇಳಿದರು . ನಾನು ಆಗೋಲ್ಲ ಎಂದು ತಿಳಿಸಿರುತ್ತೇನೆ . ಅದಕ್ಕೆ 2 ರಿಂದ 4 ನೇ ಆರೋಪಿತರು 1 ನೇ ಆರೋಪಿತಗೆ ಪ್ರೇರೇಪಿಸಿ 1 ನೇ ಆರೋಪಿತನು ಅಲ್ಲಿಯೇ ಇದ್ದ ಒಂದು ಬಡಿಗೆಯನ್ನು ತೆಗೆದುಕೊಂಡು ನನಗೆ ಎಡ ಕಾಲಿಗೆ ಹೊಡೆದು ನನ್ನನ್ನು ಮನೆಯಿಂದ



ಆಚೆಗೆ ತಳಿಸಿ ನೆಲಕ್ಕೆ ಬೀಳಿಸಿರುತ್ತಾರೆ . ಅದರ ಪರಿಣಾಮ ನನ್ನ ಸೊಂಟಕ್ಕೆ ಏಟಾಗಿ ಮೂಳೆ ಮುರಿತವಾಗಿರತ್ತದೆ ಹಾಗೂ ನನ್ನ ಎಡಗಾಲು ಮೂಳೆ ಮುರಿದಿರುತ್ತದೆ . ನಂತರ ನನಗೆ ಹೊಡೆದ ಬಗ್ಗೆ ನಾನು ಯಾರಿಗಾದರೂ ತಿಳಿಸಿದರೆ ನನ್ನನ್ನು ಕೊಲೆ ಮಾಡವುದಾಗಿ ಹಾಗೂ ನನಗೆ ವಿಚ್ಛೇದನೆಯನ್ನು ಕೊಡುವುದಾಗಿ ನನಗೆ

ಹೆದರಿಸಿರುತ್ತಾರೆ . ನಂತರ ಆರೋಪಿತರು ಅಲ್ಲಿಯೇ ಇದ್ದ ಆಯಿಂಟ್ ಮೆಂಟ್ ಅನ್ನು ನನಗೆ ಹಚ್ಚಿರುತ್ತಾರೆ . ನನಗೆ ನೋವು ಹಚ್ಚಾದ ಕಾರಣ ಆರೋಪಿತರು ನನ್ನನ್ನು ನನ್ನ ತಂದೆಯ ಮನೆಗೆ ಬಿಟ್ಟು ಹೋಗಿರುತ್ತಾರೆ . ನಂತರ ನನ್ನ ತಂದೆಯವರು ನನ್ನನ್ನು ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಕೊಡಿಸಿ ನನಗೆ ಆಪರೇಶನ್ ಅನ್ನು ಮಾಡಿಸಿರುತ್ತಾರೆ . ಅಂದಿನಿಂದ ಇಂದಿನನವರೆಗೂ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದೇನೆ . ನನಗೆ ಈಗಲೂ ನಡೆಯಲು ಸಾಧ್ಯವಾಗುತ್ತಿಲ್ಲ .

ನನಗೆ 2017 ರಂದು ಆಪರೇಶನ್ ಆಗಿರುತ್ತದೆ . ನಂತರ ಮೇ 2017 ರಂದು ನಾನು ಸೊರಬದಲ್ಲಿರುವ ನನ್ನ ಗಂಡನ ಬಾಡಿಗೆ ಮನೆಗೆ ವಾಪಾಸು ಹೋಗಿರುತ್ತೇನೆ . ನಂತರ 1 ನೇ ಆರೋಪಿತನು ನಿನ್ನ ಕೈಯಲ್ಲಿ ನಡೆಯಲು ಆಗುವುದಿಲ್ಲ , ಹಾಗೂ ನಿನ್ನನ್ನು ನಾವು ನೋಡಿಕೊಳ್ಳಲು ಆಗವುದಿಲ್ಲ ಎಂದು ಹೇಳಿ , ಜನವರಿ 2020 ರಂದು ನನ್ನನ್ನು ನನ್ನ ತಂದೆಯ ಮನೆಗೆ ಬಿಟ್ಟು ಹೋಗಿರುತ್ತಾರೆ . ಎಲ್ಲಾ ಚಿಕಿತ್ಸೆಯ ಖರ್ಚುಗಳನ್ನು ನನ್ನ ತಂದೆಯವರು ನೋಡಿಕೊಂಡಿರುತ್ತಾರೆ . ನನಗೆ ಚಿಕಿತ್ಸೆಯನ್ನು ನೀಡಿದ ನಂತರ ನನ್ನ ತಂದೆಯವರು ಆರೋಪಿತರಿಗೆ ದೂರವಾಣಿ ಮೂಲಕ ಕರೆ ಮಾಡಿ ನನ್ನನ್ನು ವಾಪಾಸು ಕರೆದುಕೊಂಡು ಹೋಗಲು ಹೇಳಿದಾಗ ಅವರು ಸೂಳೆ , ರಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಹಾಗೂ 1 ನೇ ಆರೋಪಿಗೆ ಬೇರೆ ಮದುವೆಯನ್ನು ಮಾಡುವುದಾಗಿ ಹಾಗೂ ನನಗೆ ವಿಚ್ಚೇದನ ಕೊಡುವುದಾಗಿ ಬೆದರಿಸಿರುತ್ತಾರೆ .

3 ನೇ ಆರೋಪಿತನು ನಮಗೆ ದೂರವಾಣಿ ಮೂಲಕ ಕರೆ ಮಾಡಿ ವಿಚ್ಚೇದನ ಪತ್ರಕ್ಕೆ ಸಹಿ ಮಾಡಿ ಎಂದು ಹೇಳಿ ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ . ದಿಃ 08-11-2020 ರ ಸಂಜೆ ಸುಮಾರು 5-6 ಗಂಟೆಗೆ ಆರೋಪಿತರು ಹೊಸೂರು , ಸಿದ್ದಾಪುರ ತಾಲ್ಲೂಕಿನಲ್ಲಿರುವ ನನ್ನ ತಂದೆಯ ಮನೆಗೆ ನನ್ನ ತಂದೆಯವರು ಕೊಡಿಸಿದ ಮೇಲೆ ಹೇಳಿದ ಕಾರಿನಲ್ಲಿ ಬಂದು 1 ನೇ ಆರೋಪಿಗೆ ಮತ್ತೊಂದು ಮದುವೆ ಮಾಡುವುದಾಗಿ ಹೇಳಿ ನನಗೆ ವಿಚ್ಚೇದನ ಪತ್ರಕ್ಕೆ ಸಹಿ ಮಾಡಲು ಒತ್ತಾಯ ಪಡಿಸಿರುತ್ತಾರೆ . ನಾನು ಸಹಿ ಮಾಡುವುದಿಲ್ಲ ಎಂದು ಹೇಳಿದಾಗ ಆರೋಪಿತರು ಸೂಳೆ , ರಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು , ನನ್ನನ್ನು ಹೊಡೆಯಲು



ಬಂದಾಗ ನನ್ನ ಪಕ್ಕದ ಮನೆಯವರಾದ ನಾರಾಯಣ ಲಕ್ಷ್ಮಣ್ ನಾಯ್ಕ ಅವರು ಜಗಳವನ್ನು ಬಿಡಿಸುತ್ತಿದ್ದಾಗ ನನ್ನ ತಂದೆಯವರು ತೋಟದಿಂದ ವಾಪಾಸು ಮನೆಗೆ ಬಂದಾಗ ಅವರನ್ನು ನೋಡಿ ಆರೋಪಿತರು ಎಲ್ಲರೂ ಅಲ್ಲಿಂದ ಹೊರಟು ಹೋಗಿರುತ್ತಾರೆ . ಇದರ ಪರಿಣಾಮ ನನಗೆ ಮಾನಸಿಕ ಹಿಂಸೆಯಾಗಿ ನಾನು ಆತ್ಮ ಹತ್ಯೆ ಮಾಡಿಕೊಳ್ಳುವ ಯೋಚನೆ ಮಾಡಿರುತ್ತೇನೆ . ಆದ ಕಾರಣ ನಾನು ಈ ನ್ಯಾಯಾಲಯದ ಮುಂದೆ ಆರೋಪಿತರ ವಿರುದ್ಧ ಸದ್ರಿ ದೂರನ್ನು ಸಲ್ಲಿಸಿರುತ್ತೇನೆ . ಈ ನ್ಯಾಯಾಲಯದ ಆದೇಶದ ಪ್ರಕಾರ ಪೋಲಿಸರು ಯಾವುದೇ ತನಿಖೆಯನ್ನು ಮಾಡಿರುವುದಿಲ್ಲ ಹಾಗೂ ನನ್ನ ಹಾಗೂ ಯಾವುದೇ ಸಾಕ್ಷಿಗಳ ಹೇಳಿಕೆಯನ್ನು ಸಹ ಪಡೆದಿರುವುದಿಲ್ಲ .

ಸಾಕ್ಷಿಯು ತನ್ನ ಹಾಗೂ 1 ನೇ ಆರೋಪಿತನ ಮದುವೆಯ ಆಮಂತ್ರಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದು ಈಗಾಗಲೇ ನಿಸಿ–1 ಎಂದು ಗುರುತಿಸಲಾಗಿದ್ದು, ಸಾಕ್ಷಿಯು ತನ್ನ ಮದುವೆಯ 5 ಭಾವ ಚಿತ್ರಗಳನ್ನು ಹಾಜುರಪಡಿಸುತ್ತಿದ್ದು ,ಅವುಗಳು ಈಗಾಗಲೇ ನಿಸಿ–2 ರಿಂದ 6 ಎಂದು ಗುರುತಿಸಲಾಗಿದ್ದು. ಸಾಕ್ಷಿಯು ದಿಃ 01–06–2016 ರಂದ 31–07–2019 ವರೆಗೆ ತನ್ನ ತಂದೆಯ SBI ಬ್ಯಾಂಕ್ ನ Account statement ಅನ್ನು ಹಾಜರುಪಡಿಸುತ್ತಿದ್ದು ಅದು ಈಗಾಗಲೇ ನು ನಿಸಿ–7 ಎಂದು ಗುರುತಿಸಲಾಗಿದ್ದು, ಸಾಕ್ಷಿಯು ದಿಃ 01–08–2019 ರಂದ 31–01–2020 ವರೆಗೆ ತನ್ನ ತಂದೆಯ SBI ಬ್ಯಾಂಕ್ ನ Account statement ಅನ್ನು ಹಾಜರುಪಡಿಸುತ್ತಿದ್ದು ಅದು ಈಗಾಗಲೇ ನಿಸಿ–8 ಎಂದು ಗುರುತಿಸಲಾಗಿರುತ್ತದೆ .

ಸಾಕ್ಷಿ ಈ ಹಂತದಲ್ಲಿ 8 ಭಾವಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಸಿ–9 ರಿಂದ 16 ಎಂದು ಗುರುತಿಸಲಾಯಿತು. ಸದರಿ ನಿ.ಸಿ–9 ರಿಂದ 16 ಪೋಟೊಗಳಿಗೆ ಸಂಬಂದಿಸಿದಂತೆ ಎರಡು ಸಿಡಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಸಿ–17 ಮತ್ತು ನಿಸಿ–18 ಎಂದು ಗುರುತಿಸಲಾಯಿತು. ದಿಃ 30–04–2015 ರಂದು ಮಹಾಗಣಪತಿ ಜ್ಯೂವೆಲರ್ಸ ವರ್ಕ್ಸ ಸಿದ್ದಾಪುರ ರವರು ನೀಡಿರುವ ರಶೀಧಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ–19 ಎಂದು ಗುರುತಿಸಲಾಯಿತು. ದಿಃ 14–02–2015 ರಂದು ಮಹಾಗಣಪತಿ ಜ್ಯೂವೆಲರ್ಸ ವರ್ಕ್ಸ ಸಿದ್ದಾಪುರ ರವರು ನೀಡಿರುವ ರಶೀಧಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ–20 ಎಂದು ಗುರುತಿಸಲಾಯಿತು. ದಿಃ 15–06–2018 ರಂದು ಮಹಾಗಣಪತಿ ಜ್ಯೂವೆಲರ್ಸ ವರ್ಕ್ಸ ಸಿದ್ದಾಪುರ ರವರು ನೀಡಿರುವ ರಶೀಧಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ–21 ಎಂದು ಗುರುತಿಸಲಾಯಿತು.



ನಿ.ಸಿ–9 ಭಾವಚಿತ್ರದಲ್ಲಿ ನನ್ನ ತಂದೆ ತಾಯಿ 1 ನೇ ಆರೋಪಿಗೆ ಒಂದು ಬಂಗಾರದ ಸರವನ್ನು ಹಾಕುತ್ತಿದ್ದಾರೆ. ನಿಸಿ–12 ಭಾವಚಿತ್ರದಲ್ಲಿ ನನ್ನ ತಂದೆ ತಾಯಿ 1 ನೇ ಆರೋಪಿಗೆ ವರದಕ್ಷಿಣೆಯಾಗಿ 11 ತೊಲೆ ಬಂಗಾರ ಅವುಗಳು 6 ತೊಲೆ ಬಂಗಾರದ ನೆಕ್ಲೇಸ್ , 2 ತೊಲೆ ಕಿವಿ ಓಲೆ, 1 ತೊಲೆ ಇನ್ನೊಂದು ಜೊತೆ ಕಿವಿ ಓಲೆ, 3 ತೊಲೆ ತಾಳಿ ಚೈನ್, 1 ತೊಲೆ ಮತ್ತೊಂದು ಜೊತೆ ಕಿವಿ ಓಲೆ, ಬೆಳ್ಳಿ ಸೊಂಟದ ಪಟ್ಟಿ, ಬೆಳ್ಳಿ ಕಳಸ, ಬೆಳ್ಳಿ ಪ್ಲೇಟ್, ಬೆಳ್ಳಿಯ ತಂಬಿಗೆ, ಕೊಟ್ಟಿರುವ ಬಗ್ಗೆ ತೆಗೆಸಿದ ಭಾವಚಿತ್ರ ಆಗಿರುತ್ತದೆ.

ನಿಸಿ –13 ರ ಭಾವಚಿತ್ರದಲ್ಲಿ ನನ್ನ ತಂದೆ ತಾಯಿ 1 ನೇ ಆರೋಪಿಗೆ ಬೆಳ್ಳಿ ಕಳಸವನ್ನು ಕೊಟ್ಟ ಬಗ್ಗೆ ತೆಗೆಸಿದ ಪೊಟೊ ಆಗಿರುತ್ತದೆ.

ನಿಸಿ–14 ಮತ್ತು 15 ಭಾವಚಿತ್ರದಲ್ಲಿ ಕಾಣುವ ಕಾರನ್ನು ನನ್ನ ತಂದೆ ತಾಯಿ 1 ನೇ ಆರೋಪಿಗೆ ನನ್ನ ಮದುವೆ ಕಾಲಕ್ಕೆ ಕೊಡಿಸಿದ ಕಾರು ಆಗಿದ್ದು ಆ ಬಗ್ಗೆ ತೆಗೆದಿರುವ ಭಾವಚಿತ್ರ ಆಗಿರುತ್ತದೆ.

ಆದ್ದರಿಂದ ಆರೋಪಿತರಿಗೆ ಕಾನೂನು ರೀತ್ಯಾ ಶಿಕ್ಷೆ ಕೊಡಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ .

ಈ ಹಂತದಲ್ಲಿ ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮೂಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**